**OS.No.**22/2016 **PW**-6

**ದಿನಾಂಕಃ 25.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು ಶ್ರೀ. ಕೆ.ಕೆ.ಆರ್. ವಕೀಲರಿಂದಃ**

ನಾನು 8ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದು ಬರುತ್ತದೆ. ನಾನು ಈ ಹಿತ್ತಲಕೆರೆ ಗ್ರಾಮದಲ್ಲಿ ವಾಸವಾಗಿದ್ದೇನೆಂದರೆ ಹೌದು. ಈ ದಾವೆಯನ್ನು ಯಾವ ಉದ್ದೇಶಕ್ಕಾಗಿ ಸಲ್ಲಿಸಿರುತ್ತೀರೆಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ತಿಳಿದುಕೊಂಡಿರುತ್ತೇನೆ. ಪಿತ್ರಾರ್ಜಿತ ಆಸ್ತಿಯಲ್ಲಿ ಭಾಗ ಬೇಕೆಂದು ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ. ನನ್ನ ತಂದೆ ಹೆಸರು ವೀರಪ್ಪ. ತಾಯಿ ಹೆಸರು ಗೌರಮ್ಮ. ನನ್ನ ತಂದೆ ವೀರಪ್ಪನವರು ನಿವೃತ್ತ ಶಿಕ್ಷಕರೆಂದರೆ ಹೌದು. ನನ್ನ ತಂದೆ ಕಾಲಾವಾಗಿ 50 ವರ್ಷಗಳಾಗಿರುತ್ತದೆ. ನನ್ನ ತಂದೆ ವೀರಪ್ಪನವರಿಗೆ ನನ್ನ ತಾಯಿ ಗೌರಮ್ಮರವರು 2ನೇ ಹೆಂಡತಿ ಎಂದರೆ ಹೌದು. ನನ್ನ ತಂದೆಯ ಹಿರಿಯ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ವೀರಪ್ಪರವರ ಮೊದಲನೆ ಹೆಂಡತಿಯ ಮಕ್ಕಳ ಹೆಸರು ಕೆ.ವಿ.ಬಸವರಾಜಪ್ಪ, ಗೌರಮ್ಮ, ಪಾರ್ವತಮ್ಮ, ಸಣ್ಣಸ್ವಾಮಿ ಮತ್ತು ಕುಳ್ಳಪ್ಪ ಎಂದರೆ ಹೌದು. ವೀರಪ್ಪನವರು ಹಿರಿಯ ಹೆಂಡತಿ ಮಕ್ಕಳಿಗೆ ಹಾಗೂ ಕಿರಿಯ ಹೆಂಡತಿ ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿರುವ ವಿಷಯ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲವೆಂದು ನುಡಿಯುತ್ತಾರೆ.

ನಮ್ಮ ತಂದೆ ವೀರಪ್ಪರವರಿಗೆ ಯಾವ್ಯಾವಾ ಆಸ್ತಿಗಳಿದ್ದವೆಂದರೆ ಗೊತ್ತಿಲ್ಲ. ವೀರಪ್ಪನವರಿಗೆ ಸೇರಿದ ಸ್ವತ್ತುಗಳನ್ನು ಈ ಪ್ರಸ್ತುತ ಯಾರು ಸ್ವಾಧೀನ ಮಾಡುತ್ತಿದ್ದಾರೆಂದರೆ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತಿಲ್ಲವೆಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಗೌರಮ್ಮನವರು ಗಳಿಸಿದ ಸ್ವತ್ತುಗಳೆಂದರೆ ಸಾಕ್ಷಿ ಅದೇನು ಅಂತ ಗೊತ್ತಿಲ್ಲ ಆದರೆ ದಾವಾ ಆಸ್ತಿಗಳು ನಮ್ಮ ತಾತಾನಿಂದ ಬಂದಂತಹ ಪಿತ್ರಾರ್ಜಿತ ಸ್ವತ್ತುಗಳೆಂದು ನುಡಿಯುತ್ತಾರೆ. ನಿಮ್ಮ ತಾತಾನಿಂದ ತಂದೆಗೆ, ನಂತರ

ನಿಮ್ಮ ತಾಯಿ ಹೆಸರಿಗೆ ದಾವಾ ಸ್ವತ್ತುಗಳ ಖಾತೆಯು ಬಂದ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿ ಗೊತ್ತಿಲ್ಲವೆಂದು ನುಡಿಯುತ್ತಾರೆ.

ನನ್ನ ಪರವಾಗಿ ನನ್ನ ಮಗಳು ಈ ದಾವೆಯನ್ನು ಹಾಕುವಂತೆ ಹೇಳಿರುತ್ತಾಳೆಂದರೆ ಸಾಕ್ಷಿ ಇಲ್ಲ ನಾನು ನನ್ನ ಸ್ವಇಚ್ಚೆಯಿಂದ ದಾವೆ ಸಲ್ಲಿಸಿದೇನೆಂದು ನುಡಿಯುತ್ತಾರೆ. ನನ್ನ ತಾಯಿ ಗೌರಮ್ಮಳಿಗೆ ನಾನು ಹಿರಿಯ ಮಗಳೆಂದರೆ ಹೌದು. 2ನೇ ಮಗಳು ಪ್ರಮೀಳ ಎಂದರೆ ಹೌದು. 3ನೇ ಮಗಳು ನೇತ್ರಾ ಎಂದರೆ ಹೌದು. 4ನೇ ಮಗ ಕೆ,ವಿ.ಮಂಜುನಾಥ ಮತ್ತು 5ನೇ ಸುಧಾಮಣಿ ಇರುತ್ತಾರೆ. ದೊಡ್ಡಣ್ಣ ಶಂಭುಲಿಂಗಪ್ಪ ತೀರಿಕೊಂಡಿರುತ್ತಾರೆ. ದಾವಾ ಆಸ್ತಿಗಳ ಕುರಿತು ನೀವು ಮತ್ತು ಉಳಿದ ಸಹೋದರಿಯರು ಮಾತಾನಾಡಿರುತ್ತೀರಾ ಎಂದರೆ ಸಾಕ್ಷಿ ನಾನು, ಪ್ರಮೀಳಾ, ಸುಧಾಮಣಿ ಮಾತಾನಾಡಿಕೊಂಡಿರುತ್ತೇವೆ ಆದರೆ ನೇತ್ರಾ ಇರಲ್ಲಿಲ್ಲವೆಂದು ನುಡಿಯುತ್ತಾರೆ. ಹಿಸ್ಸೆಗೆ ಸಂಬಂಧಪಟ್ಟಂತೆ ನನ್ನ ತಾಯಿ 1ನೇ ಪ್ರತಿವಾದಿಯೊಂದಿಗೆ ಮಾತಾನಾಡಿರುತ್ತೇವೆ. 1ನೇ ಪ್ರತಿವಾದಿ ಹಿಸ್ಸೆ ಬಗ್ಗೆ ಹೇಳಿದ್ದರ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನನ್ನ ತಾಯಿ ಕ್ಯಾತನಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತಾರೆ. ಈಗ 1ನೇ ಪ್ರತಿವಾದಿಗೆ 90 ವರ್ಷ ವಯಸ್ಸಾಗಿದ್ದು, ಯಾರ ಆಶ್ರಯದಲ್ಲಿ ಇದ್ದಾರೆಂದರೆ ಸಾಕ್ಷಿ ಎಲ್ಲರ ಮನೆಗೂ ಹೋಗಿ ಬಂದು ಮಾಡುತ್ತಾ ಆರಾಮಾಗಿದ್ದಾರೆಂದು ನುಡಿಯುತ್ತಾರೆ. ಹೆಣ್ಣು ಮಕ್ಕಳೆಲ್ಲರೂ ವಯಸ್ಸಾದ 1ನೇ ಪ್ರತಿವಾದಿಯನ್ನು ನಿರ್ಲಕ್ಷ ಮಾಡಿದ್ದರಿಂದ ಈಗ 1ನೇ ಪ್ರತಿವಾದಿ ಆರೈಕೆಯನ್ನು ಮೃತ ಶಂಭುಲಿಂಗಪ್ಪರವರ ಮಗನಾದ 3ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಾರೆಂದರೆ ಸರಿಯಲ್ಲ.

ಈ ದಾವೆಯನ್ನು ನನ್ನ ತಂದೆ ವೀರಪ್ಪರವರ ಪಿತ್ರಾರ್ಜಿತ ಸ್ವತ್ತುಗಳು ಸೇರ್ಪಡೆಯಾಗಿಲ್ಲವೆಂದರೆ ಗೊತ್ತಿಲ್ಲ. ದಾವಾ ಕ್ರಮ ಸಂ.1ರ ಸ್ವತ್ತು 1ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ನನ್ನ ತಾತಾ ಕಾಲದ ಆಸ್ತಿಯೆಂದು ನುಡಿಯುತ್ತಾರೆ. ಕ್ರಮ ಸಂ.1ರ ಸ್ವತ್ತು ನನ್ನ ತಾತಾನ ಕಾಲದ ಸ್ವತ್ತು ಎಂದು

ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ದಾವಾ ಕ್ರಮ ಸಂ.2ರ ಆಸ್ತಿಗೆ ಶುದ್ಧಕ್ರಯ ಪತ್ರದ ಮೂಲಕ 1ನೇ ಪ್ರತಿವಾದಿ ಖರೀದಿ ಮಾಡಿದ ಆಸ್ತಿಯೆಂದರೆ ಗೊತ್ತಿಲ್ಲ. ಕೆ.ವಿಶ್ವನಾಥಪ್ಪರವರಿಂದ 1ನೇ ಪ್ರತಿವಾದಿ ಕ್ರಮ ಸಂ.2ನ್ನು ಕ್ರಯ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆಂದರೆ ಗೊತ್ತಿಲ್ಲ. ದಾವಾ ಕ್ರಮ ಸಂ. 3ನ್ನು 1ನೇ ಪ್ರತಿವಾದಿ ಶುದ್ಧ ಕ್ರಯಪತ್ರದ ಮೂಲಕ ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ. ಕ್ರಮ ಸಂ.4 ಆಸ್ತಿಯು ಸಹ 1ನೇ ಪ್ರತಿವಾದಿಗೆ ಶುದ್ಧ ಕ್ರಯಪತ್ರ ಮೂಲಕ ಬಂದಂತಹ ಸ್ವತ್ತು ಎಂದರೆ ಸರಿಯಲ್ಲ. ದಾವಾ ಕ್ರಮ ಸಂ.5ರ ಆಸ್ತಿಯನ್ನು 1ನೇ ಪ್ರತಿವಾದಿಯು ಶುದ್ಧ ಕ್ರಯಪತ್ರದ ಮೂಲಕ ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ. ಕ್ರಮ ಸಂ.5ರ ಸ್ವತ್ತನ್ನು 1ನೇ ಪ್ರತಿವಾದಿ ಈಗಾಗಲೇ ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿ ಮಾರಾಟ ಮಾಡಿದ್ದು ನಿಜ ಆದರೆ ನಮಗೆ ತಿಳಿಯದಂತೆ ಮಾರಾಟ ಮಾಡಿರುತ್ತಾರೆಂದು ನುಡಿಯುತ್ತಾರೆ.

ಶ್ರೀ. ಕೆ.ಕೆ.ಆರ್. ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಇದೆ.

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.